ಓ ಎಸ ನಂ. **79/2018**
ಪಿಡಬ್ಲೂ-**1** (ಈಶ್ವರಮ್ಮ)

ಇಂದು ದಿನಾಂಕಃ **17-03-2021** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಶ್ರೀ ವಿ.ಜೆ.ಎಮ್ ವಕೀಲರಿಂದ (ಪ್ರತಿವಾದಿ ಪರ)

ನಮ್ಮ ತಂದೆಗೆ ನಾವು ಒಟ್ಟು 6 ಜನ ಮಕ್ಕಳಿದ್ದು ಅವರ ಹೆಸರು ಹಣಮಮ್ಮ, ನಾಗೇಂದ್ರಮ್ಮ, ಭೀಮರೆಡ್ಡಿ ಈಶ್ವರಮ್ಮ, ಸುಶೀಲಾ ಮತ್ತು ಸುಮಿತ್ರ ಆಗಿರುತ್ತಾರೆ ನಾಗೇಂದ್ರಮ್ಮರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. 3 ನೇ ವಾದಿಗೆ ತಾಂಡೂರನಲ್ಲಿ ಪ್ಲಾಟ್ ಇದೆ ಎಂದರೆ ಸರಿ. ಅವುಗಳನ್ನು ಅವರು ಸ್ವಂತ ಗಳಿಸಿರುತ್ತಾರೆ. ನಮ್ಮ ದಾವೆಯಲ್ಲಿ 3 ನೇ ವಾದಿಯ ಉದ್ಯೋಗ ಮನೆಗೆಲಸ ಬರೆಸಿದ್ದೇವೆ ಎಂದರೆ ಸರಿ. ಅವರಿಗೆ ಆದಾಯ ಎಲ್ಲಿಂದ ಬಂತು ಎಂದರೆ ಅದು ಅವರ ಹೊಲದಿಂದ ಬಂದಿದೆ ಎಂದು ಹೇಳಿರುತ್ತಾರೆ. 3 ನೇ ವಾದಿಗೆ ಒಟ್ಟು 6 ಎಕರೆ ಜಮೀನು ಇದ್ದಿರುತ್ತದೆ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಸಿರುವಂತಹ ಪ್ಲಾಟ ನಂ.52 ವಿದ್ಯಾನಗರ ಸೇಡಂ ನಮ್ಮ ಮನೆತನಕ್ಕೆ ಸಂಬಂಧಪಟ್ಟಿದ್ದು ಅಲ್ಲ ಎಂದರೆ ಸರಿ. ಮನೆ ನಂ.8-113/8 ದಾವಾ ಐಟಮ್ ನಂ.11 ರ ಪಶ್ಚಿಮಕ್ಕೆ ವರಲಕ್ಷ್ಮಿ ಗಜ್ಜ ಅವರ ಮನೆ ಇದ್ದಿರುತ್ತದೆ. ನನ್ನ ತಂದೆಯವರು ನನ್ನ ಅಣ್ಣನಿಗೆ ಹಣ ಬ್ಯಾಂಕ್‌ನ ಸಾಲವನ್ನು ತೀರಿಸಲು ಯಾವುದೇ ಹಣವನ್ನು ನೀಡಿಲ್ಲ ಎಂದರೆ ಸರಿಯಲ್ಲ.

ಓ ಎಸ ನಂ. **79/2018**<br>ಪಿಡಬ್ಲೂ-**1** (ಈಶ್ವರಮ್ಮ )

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ 2 ನೇ ಪ್ರತಿವಾದಿಯವರು ನನ್ನ ಸಾಮಾನುಗಳನ್ನು ತೆಗೆದುಕೊಂಡು ಹೋಗಲು ಬಿಡಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಪೋಲಿಸರಿಗೆ ನಾನು ದೂರು ಕೊಟ್ಟಿಲ್ಲ ಎಂದರೆ ಸರಿ. ಸರ್ವೆ ನಂ.83/2 ಮತ್ತು ಸರ್ವೆ ನಂ.82/2 ಹಾಗೂ ಸರ್ವೆ ನಂ.526 ನನ್ನ ತಂದೆ ಸ್ವಂತ ಗಳಿಸಿದ ಆಸ್ತಿ ಎಂದರೆ ಸರಿ. ನನ್ನ ತಂದೆಯವರ ಸ್ವಂತ ಗಳಿಕೆ ಆಸ್ತಿಗಳಾಗಿದ್ದರಿಂದ ಅವರು ಅವರ ಮೊಮ್ಮಗನಾದ ರೋಹಿತರೆಡ್ಡಿ ಅವರ ಹೆಸರಿಗೆ ವಿಲ್‌ನ್ನು ಮಾಡಿದ್ದಾರೆಂದರೆ ಸರಿಯಲ್ಲ. ವಿಲ್‌ನ ಪ್ರಕಾರ ನನಗೆ ಮೇಲ್ಕಂಡ 3 ಆಸ್ತಿಗಳಲ್ಲಿ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ನಂ.8 ರಿಂದ 10 ನ್ನು ನನ್ನ ತಾಯಿಯವರು ತನ್ನ ತವರು ಮನೆಯಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ನನ್ನ ತಾಯಿಯ ಸ್ವಂತ ಆಸ್ತಿಗಳು ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ನನ್ನ ತಾಯಿಯ ಸ್ವಂತ ಆಸ್ತಿಗಳಾಗಿದ್ದರಿಂದ ನನಗಾಗಲೀ, ನನ್ನ ಅಕ್ಕ-ತಂಗಿಯರಿಗಾಗಲೀ, ನನ್ನ ಅಣ್ಣನಿಗಾಗಲೀ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು 1 ಮತ್ತು 2 ನೇ ಪ್ರತಿವಾದಿಯ ಸ್ವಾಧೀನದಲ್ಲಿದೆ ಎಂದರೆ ಸಾಕ್ಷಿಯು ಎಲ್ಲರ ಸ್ವಾಧೀನದಲ್ಲಿದ್ದು, ಅದನ್ನು 2 ನೇ ಪ್ರತಿವಾದಿ ನೋಡಿಕೊಳ್ಳುತ್ತಾರೆ ಎಂದು ನುಡಿದಿರುತ್ತಾರೆ. ನಾನಾಗಲೀ, ನನ್ನ ಅಕ್ಕ-ತಂಗಿಯರಿಗಾಗಲೀ ನನ್ನ ತಂದೆ ಮತ್ತು ಅಣ್ಣನಿಗೆ ಭಾಗವನ್ನು ಕೇಳಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಮಗೆ ಯಾವುದೇ ಭಾಗ ಇಲ್ಲದೇ ಇದ್ದರು ಸಹ ಸುಳ್ಳು ದಾವೆಯನ್ನು ಹಾಕಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,<br>ಮತ್ತು ಜೆ.ಎಮ್.ಎಫ್.ಸಿ, ಸೇಡಂ.